ತನ್ನನ್ನು ಕೊಟ್ಟುಕೊಳ್ಳುವವನು, ಇದೊಂದು ಅದ್ವೈತದ ಸಂಬಂಧ. ಅದ್ವೈತದಲ್ಲಿ 'ತಾನು' ಎಂಬುದಕ್ಕೆ ಇಂಬಿಲ್ಲ. ಆ ಅಹಂಕಾರದ ಬಲೆಯಿಂದ ಅವನು ಹೊರಬರಬೇಕು ಎನ್ನುವುದೇ ಅಲ್ಲಮನ ಆಲೋಚನೆ. ಆದರೆ ಆರಂಭದಲ್ಲಿ ಸಿದ್ಧರಾಮನಿಗೆ ಈ ಮಾತುಗಳನ್ನು ಕೇಳುವುದೇ ಸಹ್ಯವಾಗದು. ತಾನು ಮಾಡುತ್ತಿರುವುದು ಲೋಕೋತ್ತರವಾದ ಕೆಲಸ ಎನ್ನುವ ಆತ್ಮಪ್ರತ್ಯಯದಿಂದ ಅವನು ಹೊರಬರಲು ನಡೆಸುವ ಹರಸಾಹಸವನ್ನು ಕೃತಿ ಚೆನ್ನಾಗಿ ಹಿಡಿಯುತ್ತದೆ.

ಅಲ್ಲಮ ನಡೆಸುವ ಲೋಕಪರ್ಯಟನ, ಅದರುದ್ದಕ್ಕೂ ಅವನು ಸಹಜೀವಿಗಳೊಂದಿಗೆ ನಡೆಸುವ ಸಂವಾದಗಳು ಅವನನ್ನು ಏಕಾಂಗಿ, ಲೋಕವಿರೋಧಿ, ವಿಕ್ಷಿಪ್ತ, ಮೌನಿ ಮೊದಲಾದ ಮಂಡಿತ, ಒಪ್ಪಿತ ಅಡಗುತಾಣಗಳಿಂದ ಹೊರತಂದು ಅವನನ್ನು ನೇರ ನಡೆ ನುಡಿಯ, ಜನಪ್ರೀತಿಯ ವ್ಯಕ್ತಿಯನ್ನಾಗಿ ಮಾಡುತ್ತದೆ. ಇದೊಂದು ಅಪೇಕ್ಷಣೀಯವಾದ, ಮನದಟ್ಟಾಗುವ ಅಂಶ. ಆದರೆ ಇದೇ ಮಾತನ್ನು ಅಕ್ಕನ ಬಗೆಗೆ ಹೇಳುವುದು ಕಷ್ಟ. ಇಲ್ಲಿಯೂ ಸುಮಂಗಲ ಅಲ್ಲಮನ ಸದಾಶಯದ ನಿಲುವನ್ನೇ ಎತ್ತಿ ಹಿಡಿಯುತ್ತಾರೆ. ಹೀಗಿದ್ದೂ ಅದನ್ನು ಒಪ್ಪುವುದು ಸುಲಭವಲ್ಲ. ಏಕೆಂದರೆ ಇಲ್ಲಿ ಅಕ್ಕನ ದಾರಿಯ ದೌರ್ಬಲ್ಯವನ್ನಲ್ಲ, ಹೆಣ್ಣಾದ ಅಕ್ಕನ ಮಿತಿಯನ್ನೇ ಗಂಡಾಳಿಕೆಯ ವಕ್ತಾರನಾಗಿ ಅಲ್ಲಮ ಕೇಳುತ್ತಿರುವಂತೆಯೇ ಅನ್ನಿಸುತ್ತದೆ. ಲೋಕಕ್ಕೆ ಅಕ್ಕನ ಭಕ್ತಿಯನ್ನು ಯಾಕಾಗಿ ಪ್ರಮಾಣಿಸಿ ತೋರಿಸಬೇಕು? ಇಂಥ ಕೋರ್ಟ್ ಮಾರ್ಷಲ್ ಅನ್ನು ಯಾವ ಗಂಡು ಭಕ್ತರಿಗೂ ಮಾಡುವುದಿಲ್ಲವಲ್ಲ? ಕೌಶಿಕನೊಂದಿಗೆ ತಪ್ಪಿ ನಡೆದು ಅವಳು ಬಂದಿದ್ದಾಳೆ ಎನ್ನುವ 'ಆರೋಪ'ಕ್ಕೆ ಉತ್ತರ ಕೊಡುವ ದರ್ದು ಸೃಷ್ಟಿಯಾಗುವುದು ಯಾರಿಂದ? ಯಾರಿಗಾಗಿ? ಚೆನ್ನಮಲ್ಲಿಕಾರ್ಜುನ ದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ ಲೋಕಮನ್ನಣೆಯ ಹಂಗಿರುವುದು ಸಾಧ್ಯವಿಲ್ಲ. ಅದು ಗಂಡಾಳಿಕೆ ಹೆಣ್ಣಿಗೆ ಹಾಕಿರುವ ಕರಾರು. ಅದರ ರೂಪ, ಬಣ್ಣ, ಆಶಯ ಏನೇ ಇರಲಿ, ನಿಜದಲ್ಲಿ ಅದು ಕರಾರು ಅಷ್ಟೇ ಅನ್ನಿಸುತ್ತದೆ. ಹೆಣ್ಣಿನ ಆಯ್ಕೆಯ ಬದುಕಿನ ದಾರಿ ಆ ಕಾಲಕ್ಕೂ ಲೋಕಕ್ಕೂ ಧಾರ್ಷ್ಟ್ಯದ್ದಾಗಿ ಕಂಡಿದ್ದಿರಬಹುದೆ?

ಅಲ್ಲಮನ ಸ್ವಾಗತಕ್ಕಾಗಿ ಬಸವಣ್ಣ ಮಾಡಿದ ಏರ್ಪಾಡುಗಳನ್ನು, ಅಲ್ಲಮ ಗೇಲಿ ಮಾಡುವ ಪ್ರಸಂಗವಂತೂ ತುಂಬಾ ಮಾನವೀಯವಾಗಿ ಮತ್ತು ವಾಸ್ತವಿಕವಾಗಿ ಚಿತ್ರಿತವಾಗಿದೆ. ಅವರ ನಡುವಿನ ಮುಂದುವರಿದ ಚರ್ಚೆ ಇಡೀ ಆಂದೋಲನದ ಮೂಲಧಾತುಗಳನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ.

ರಾಮೇಶ್ವರದಿಂದ ಕಾಶ್ಮೀರದ ತನಕದ ಅಲ್ಲಮನ ಅಲೆದಾಟ ವೈದಿಕ ವಿರೋಧಿ ಅಲೆಯೊಂದು ಭಾರತ ಪರ್ಯಟನ ಮಾಡಿದಂತೆ ಅನ್ನಿಸುತ್ತದೆ. ಸಮಾನಮನಸ್ಕರನ್ನು ಭಾರತದ ಮಟ್ಟದಲ್ಲಿ ಜೋಡಿಸುವ ಹವಣಿಕೆಯಾಗಿಯೂ ಇದು ಕಾಣಿಸುತ್ತದೆ. ಅದು ಶೈವ ಸಿದ್ಧಾಂತಕ್ಕಿಂತ ಮಾನವ ಸಿದ್ಧಾಂತವನ್ನು ಪ್ರಚಾರ ಮಾಡಲು ಮಾತ್ರವಲ್ಲ, ಮಾನವ ದಯಾಮೃತ ಇದೆ ಎನ್ನುವುದನ್ನು ಸ್ವತಃ ಕುಡಿದು ಅಲ್ಲಮ ಅರ್ಥಮಾಡಿಕೊಂಡ ಪ್ರಯಾಣದಂತೆ ಕಾಣಿಸುತ್ತದೆ. ಸಾಮಾಜಿಕ ನ್ಯಾಯದ, ಮಾನವರ ಮೂಲಭೂತ ಹಕ್ಕುಗಳ ವಿಚಾರಗಳು ಭಾಷೆಯ ಹಂಗಿಲ್ಲದೆಯೂ ತಲುಪಬಹುದೆನ್ನುವುದನ್ನು ನಾಟಕೀಯವಾಗಿಯೇ ಸುಮಂಗಲಾ ಕಾಣಿಸುತ್ತಾರೆ.

ಅಲ್ಲಮ ಕಲ್ಯಾಣಕ್ಕೆ ಬಂದಾಗ ಅನುಭವ ಮಂಟಪದ ರೂಪುರೇಷೆಗಳು ಸಿದ್ಧವಾಗಿ, ಅಲ್ಲಮ ಪರ್ಯಟನಕ್ಕೆ ಹೊರಟಾಗ ಚೆನ್ನಬಸವಣ್ಣ ಅದನ್ನು ನೋಡಿಕೊಳ್ಳುವುದೆಂದಾಗಿ, ಅಲ್ಲಮ ಮರಳಿ ಬಂದ ಮೇಲೆ ಅವನೇ ಅದರ ಸಾರಥ್ಯ ವಹಿಸುವ ಮಾತೂ ಆಗಿರುತ್ತದೆ. ಹನ್ನೆರದು ವರ್ಷಗಳು ಕಳೆದ ಮೇಲೆ ಅಲ್ಲಮನ ಬರುವಿಗಾಗಿ ಬಸವಣ್ಣ ಆರ್ತನಾಗಿ ಕಾಯುವ, ಮತ್ತದೇ ಸ್ವಾಗತಕ್ಕಾಗಿ ನಡೆಸುವ ಸನ್ನಿವೇಶಗಳು ನಾವು ಮೆಚ್ಚಿ ಗೌರವಿಸುವ ವ್ಯಕ್ತಿತ್ವಗಳನ್ನು ಇನ್ನೂ ಮಾನವೀಯವಾಗಿಸುತ್ತವೆ.

ನನ್ನ ಮಟ್ಟಿಗೆ ಅಲ್ಲಮ ಕನ್ನಡದ ಮೊದಲ ಸ್ತ್ರೀವಾದಿ. 'ಹೆಣ್ಣು ಮಾಯೆಯಲ್ಲ' ಎನ್ನುವ ಮೂಲಕ ಹೆಣ್ಣನ್ನು ಗಂಡಾಳಿಕೆಯಿಂದ ಬಿಡಿಸಲು ಯತ್ನಿಸಿದ ಮೊದ ಮೊದಲ ಗಂಡು ಅಲ್ಲಮ. ಹೆಣ್ಣಿನ ಸಕಾರಣ ಪ್ರೀತಿ, ಗೌರವಕ್ಕೆ ಪಾತ್ರನಾದ ಅಲ್ಲಮನನ್ನು ರಕ್ತಮಾಂಸಗಳ, ಬದ್ಧ ಬೌದ್ಧಿಕತೆಯ, ಕರಗುವ ಅಂತಃಕರಣದ 'ನಮ್ಮವ'ನಾಗಿ ಈ ಕೃತಿ ಕಾಣಿಸುತ್ತದೆ.

●